# ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು

ಗೀತಾಲಕ್ಷ್ಮಿ ಎಸ್.ಎನ್.

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಿ.ಬಿ. ಭಂಡಾರಿ ಜೈನ್ ಕಾಲೇಜು, ವಿ.ವಿ. ಪುರಂ, ಬೆಂಗಳೂರು.

DOI: https://doi.org/10.5281/zenodo.15490828

## ABSTRACT:

"ವಚನಕಾರರು ಮೌಲ್ಯಗಳಿಗಾಗಿಯೇ ಬದುಕಿದವರು''. ನೆಡೆ-ನುಡಿಯ ಸಮನ್ವಯದ ಅಗತ್ಯತೆಯನ್ನು ಸಾರಿದ್ದಾರೆ. ನಮ್ಮ ನುಡಿಯು ಸತ್ಯಶುದ್ಧವಾಗಿರಬೇಕು, ಪಾರದರ್ಶಕವಾಗಿರಬೇಕು, ಪ್ರಕಾಶಮಾನವಾಗಿರಬೇಕು. ಮನವನ್ನು ಮುಟ್ಟುವಂತಿರಬೇಕು. ಸಕಲಜೀವಿಗಳಲ್ಲಿ ಮನುಷ್ಯ ಮಾತ್ರ ಜೀವನ ಮೌಲ್ಯಗಳನ್ನಳವಡಿಸಿಕೊಳ್ಳಲು ಸಾಧ್ಯ. ಮೌಲ್ಯಗಳಿಂದಲೇ ಜೀವನ ಸಾರ್ಥಕವಾಗುತ್ತದೆ. ಈ ಹಿನ್ನಲೆಯಲ್ಲಿ ಮೌಲ್ಯಗಳು, ಬದುಕಿಗೆ ಅನಿವಾರ್ಯವಾಗಿವೆ. ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ, ತ್ಯಾಗ, ಸ್ನೇಹ, ಪ್ರಾಮಾಣಿಕತೆ ಇಂತಹ ಅನೇಕ ಜೀವನ ಮೌಲ್ಯಗಳನ್ನು ವಚನಕಾರರಲ್ಲಿ ಕಾಣಬಹುದಾಗಿದೆ. ಕಾಯಕ, ದಾಸೋಹ, ಸಾಮಾಜಿಕನ್ಯಾಯದಂತಹ ಮೌಲ್ಯಗಳನ್ನು ಶರಣರು ಹೊಸದಾಗಿ ಕಟ್ಟಿಕೊಟ್ಟಿದ್ದಾರೆ. ಜೀವ ಎಷ್ಟು ಮುಖ್ಯವೋ ಜೀವನವೂ ಅಷ್ಟೇ ಮುಖ್ಯ, ಜೀವನ ಎಷ್ಟು ಮುಖ್ಯವೋ ಜೀವನ ಮೌಲ್ಯಗಳೂ ಅಷ್ಟೇ ಮುಖ್ಯವಾಗಿವೆ. ಶರಣರು ಕಾಯಕವೇ ಕೈಲಾಸ ಎಂಬ ತತ್ವದಲ್ಲಿ ದುಡಿಮೆಯೇ ಪರಿಪೂರ್ಣತೆಯ ಮಾರ್ಗವೆಂದು ತಿಳಿಸಿ ದುಡಿಮೆಯ ಗೌರವವನ್ನು ಹೆಚ್ಚಿಸಿದರು. ಕಾಯಕದ ಶ್ರಮ ಸಂಸ್ಕೃತಿಯನ್ನು ದೈವತ್ವಕ್ಕೇರಿಸಿ ಅದನ್ನೊಂದು ಜೀವನ ಮೌಲ್ಯವನ್ನಾಗಿ ಮಾಡಿದರು. ಕಾಯಕವೇ ಪ್ರತಿಯೊಬ್ಬರ ಜೀವನದ ಕರ್ತವ್ಯವಾಗಬೇಕು. ಈ ಕಾಯಕದಲ್ಲಿ ಮೇಲು ಕೀಳುಗಳಿರುವುದಿಲ್ಲ. ಮಾನವನಲ್ಲಿ ಸುಪ್ತವಾಗಿರುವ ವಿವಿಧ ಕ್ರಿಯಾಶಕ್ತಿಯನ್ನು ಉತ್ತಮಗೊಳಿಸಿ, ಅದರಿಂದ ತನಗೂ ಉಳಿದವರಿಗೂ ಸೊಗಸುಂಟಾಗುವಂತೆ ಮಾಡುವ ಕಲೆಯೇ ಕಾಯಕ. ಸಮಾಜಮುಖಿ ಚಿಂತನೆಯು ಒಂದು ಪ್ರಮುಖ ಜೀವನ ಮೌಲ್ಯವನ್ನಾಗಿ ಮಾಡಿದರು. ಅಂತರಂಗದ ಸಂಸ್ಕಾರವಿಲ್ಲದೆ ಬಾಹ್ಯವಾಗಿ ಮಾಡುವ ಎಲ್ಲ ಉಪಚಾರಗಳೂ ವ್ಯರ್ಥವೇ. ಬಹಿರಂಗ ಆಚರಣೆಗಿಂತ ಅಂತರಂಗದ ಸಂಸ್ಕಾರ ಮುಖ್ಯ ಎಂದು ವಿವರಿಸುವ ಮೂಲಕ ಮಾನವನ ಜೀವನ ಈ ಎಲ್ಲಾ ರೀತಿಯ ಜೀವನಮೌಲ್ಯವನ್ನು ಅಗತ್ಯವಾಗಿ ಹೊಂದಿರಬೇಕು.

## KEYWORDS:

ವೈಚಾರಿಕ ಚಿಂತನೆ, ದಾಸೋಹ ಸಿದ್ಧಾಂತ, ಕಾಯಕ ತತ್ವ, ಸಮಾಜವಾದದ ಪ್ರತಿಪಾದನೆ, ಅಂತರಂಗದ ಸಂಸ್ಕಾರ, ಜ್ಞಾನದ ಮಹತ್ವ.

**ಪೀಠಿಕೆ:**

ವಚನ ಸಾಹಿತ್ಯ ಒಂದು ಅನನ್ಯ ಮತ್ತು ಪ್ರಬಲ ಸಾಹಿತ್ಯ ಪ್ರಕಾರವಾಗಿದೆ. ಇದು 12ನೇ ಶತಮಾನದಲ್ಲಿ ಶಿವಶರಣರು, ಸಂತರು ಮತ್ತು ಶರಣೆಯರು ರಚಿಸಿದ ಕೃತಿಗಳಾಗಿವೆ. ಈ ಸಾಹಿತ್ಯವು ಆಧ್ಯಾತ್ಮಿಕತೆ, ಸಮಾಜದ ಸುಧಾರಣೆ, ಅನುಭವಶ್ರದ್ಧೆ ಮತ್ತು ಜೀವನ ಮೌಲ್ಯಗಳ ಬಗೆಗಿನ ಆಳವಾದ ಚಿಂತನೆಗಳನ್ನು ಪ್ರತಿಬಿಂಬಿಸುತ್ತದೆ.

ಮೌಲ್ಯಗಳ ಬಗೆಗೆ ಅನೇಕ ವ್ಯಾಖ್ಯಾನಗಳಿವೆ. ಮೌಲ್ಯವೆಂದರೆ ಬೆಲೆಯುಳ್ಳದ್ದು, ಸಮುದಾಯದ ಜನ ಅದಕ್ಕೆ ಗೌರವ ಕೊಡುವಂತಹದ್ದೂ ಆಗಿರುತ್ತದೆ. ಕಾಲ ಬದಲಾದಂತೆ ಕೆಲವು ಮೌಲ್ಯಗಳೂ ಬದಲಾಗುತ್ತವೆ. ಒಂದು ಕಾಲದಲ್ಲಿದ್ದ ಮೌಲ್ಯ ಮತ್ತೊಂದು ಕಾಲಕ್ಕೆ ಅಪಮೌಲ್ಯವೆನಿಸಬಹುದು. ಜೀವನದಲ್ಲಿ ಮೌಲ್ಯಗಳಿದ್ದಾಗಲೇ ಆ ಜೀವನ ಸಾರ್ಥಕವೆನಿಸುತ್ತದೆ. ಸಕಲಜೀವಿಗಳಲ್ಲಿ ಮನುಷ್ಯ ಮಾತ್ರ ಜೀವನ ಮೌಲ್ಯಗಳನ್ನಳವಡಿಸಿಕೊಳ್ಳಲು ಸಾಧ್ಯ. ಪಶು–ಪ್ರಾಣಿ–ಪಕ್ಷಿ–ಸಸ್ಯ ಈ ಜೀವಿಗಳಲ್ಲಿ ಜೀವವಿರುತ್ತದೆಯೇ ಹೊರತು, ಜೀವನ ಮೌಲ್ಯಗಳಿರುವುದಿಲ್ಲ. ಹೀಗಾಗಿ ಜೀವಿಗಳಲ್ಲಿಯೇ ಮನುಷ್ಯಜೀವಿಗೆ ಅನೇಕ ಸಾಧ್ಯತೆಗಳಿವೆ. ಬುದ್ಧಿ, ತಿಳುವಳಿಕೆ, ವಿಚಾರ ಇವು ಮನುಷ್ಯನಿಗಿರುತ್ತವೆಯೇ ಹೊರತು, ಉಳಿದ ಜೀವಿಗಳಿಗಿರುವುದಿಲ್ಲ. ಆ ಕಾರಣಕ್ಕಾಗಿಯೇ ಮನುಷ್ಯ ಬುದ್ಧಿಜೀವಿಯಾಗಲು ಸಾಧ್ಯವಿದೆ.

ಕಾಲದಿಂದ ಕಾಲಕ್ಕೆ ಮನುಷ್ಯನ ಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಹೀಗಾಗಿ ಜೀವನ ಮೌಲ್ಯಗಳು ವರ್ತಮಾನಕ್ಕೆ ತಕ್ಕಂತೆ, ಜನಸಮುದಾಯಕ್ಕೆ ತಕ್ಕಂತೆ ಸೃಷ್ಟಿಯಾಗುತ್ತವೆ. ಜೀವನ ಹೇಗಿರಬೇಕೆಂಬುದನ್ನು ಮನುಷ್ಯ ಮಾತ್ರ ಆಲೋಚಿಸುತ್ತಾನೆ. ಉಳಿದ ಜೀವಿಗಳಿಗೆ ಈ ಆಲೋಚನೆ ಇರುವುದಿಲ್ಲ. ಮೌಲ್ಯಗಳಿಂದಲೇ ಜೀವನ ಸಾರ್ಥಕವಾಗುತ್ತದೆ. ಈ ಹಿನ್ನಲೆಯಲ್ಲಿ ಮೌಲ್ಯಗಳು, ಬದುಕಿಗೆ ಅನಿವಾರ್ಯವಾಗಿವೆ.

**ವೈಚಾರಿಕ ಚಿಂತನೆ:**

ಶಿವಶರಣರು ಮೌಲ್ಯಗಳಿಗಾಗಿಯೇ ಬದುಕಿದವರು, ಅವರ ಜೀವನ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಅವರು 12ನೇ ಶತಮಾನದಲ್ಲಿ ರೂಪಿಸಿದ್ದ ಜೀವನ ಮೌಲ್ಯಗಳು ಇಂದಿಗೂ ಆದರ್ಶವಾಗಿವೆ. ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ, ತ್ಯಾಗ, ಸ್ನೇಹ, ಪ್ರಾಮಾಣಿಕತೆ ಇಂತಹ ಅನೇಕ ಜೀವನ ಮೌಲ್ಯಗಳನ್ನು ವಚನಕಾರರಲ್ಲಿ ಕಾಣಬಹುದಾಗಿದೆ. ಕಾಯಕ, ದಾಸೋಹ, ಸಾಮಾಜಿಕನ್ಯಾಯದಂತಹ ಮೌಲ್ಯಗಳನ್ನು ಶರಣರು ಹೊಸದಾಗಿ ಕಟ್ಟಿಕೊಟ್ಟಿದ್ದಾರೆ. ಜೀವ ಎಷ್ಟು ಮುಖ್ಯವೋ ಜೀವನವೂ ಅಷ್ಟೇ ಮುಖ್ಯ, ಜೀವನ ಎಷ್ಟು ಮುಖ್ಯವೋ ಜೀವನ ಮೌಲ್ಯಗಳೂ ಅಷ್ಟೇ ಮುಖ್ಯವಾಗಿವೆ. ಅಹಿಂಸೆಯೆಂಬುದು ಬಹುಮಹತ್ವದ ಜೀವನ ಮೌಲ್ಯವಾಗಿದೆ. ಈ ಮೌಲ್ಯ ಬುದ್ಧನಿಂದ ಪ್ರಾರಂಭವಾಗಿ, ಮಹಾವೀರನಿಂದ ಬೆಳೆದು, ಬಸವಾದಿ ಶರಣರಲ್ಲಿ ಜಗವ ವ್ಯಾಪಿಸಿದೆ.

‘‘ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರಗುವಂತೆ ಅವಕೇಕೆ ಮರುಗ?. ” – ಅಕ್ಕಮಹಾದೇವಿ

ಅಕ್ಕಮಹಾದೇವಿ ಈ ವಚನದ ಮೂಲಕ ಅಹಿಂಸಾ ಮೌಲ್ಯದ ಬಗೆಗೆ ಮಾತನಾಡಿದ್ದಾರೆ. ಇಲ್ಲಿ ಒಂದು ಉದಾಹರಣೆ ಕೊಡುತ್ತಾರೆ. ಜಾಲಗಾರ ಜಲವನ್ನು ಹೊಕ್ಕು ಶೋಧಿಸಿ, ಜಲದಲ್ಲಿರುವ ಹಲವು ಪ್ರಾಣಿಗಳನ್ನು ಕೊಂದು ತನಗೆ ಆಹಾರ ಸಿಕ್ಕಿತೆಂದು ನಲಿನಲಿದಾಡುತ್ತಾನೆ. ಆದರೆ ತನ್ನ ಮನೆಯಲ್ಲಿ ತನ್ನ ಮಗು ಸತ್ತರೆ ಮರುಗುತ್ತಾನೆ, ದುಃಖ ಪಡುತ್ತಾನೆ. ತನ್ನ ಮನೆಯ ಶಿಶುಸತ್ತಾಗ ಮರುಗುವ ಜಾಲಗಾರನು ಜಲದಲ್ಲಿರುವ ಪ್ರಾಣಿಗಳನ್ನು ಕೊಂದಾಗ ಏಕೆ ಮರುಗಲಾರ? ತನ್ನ ಮನೆಯ ಶಿಶುವಿಗೆ ಹೇಗೆ ಜೀವವಿದೆಯೋ ಹಾಗೆಯೇ ಜಲದಲ್ಲಿರುವ ಪ್ರಾಣಿಗಳಿಗೂ ಜೀವವಿದೆ. ಆ ಜೀವಗಳನ್ನು ಸಾಯಿಸಿ, ಈ ಜೀವಕ್ಕೆ ಮಾತ್ರ ಮರುಗುವುದು ಸರಿಯೇ? ಎಂದು ಪ್ರಶ್ನಿಸುತ್ತಾಳೆ. ಜೀವಹಿಂಸೆ ಮಾಡುವವನೇ ನಿಜವಾದ ಮಾದಿಗನೆಂದು ಹೇಳಿದ ಅಕ್ಕ ಇಂತಹ ಹಿಂಸಾವಾದಿಗಳನ್ನು ಈ ವಚನದಲ್ಲಿ ವಿರೋಧಿಸಿದ್ದಾರೆ.

ಮನುಷ್ಯ ತನಗೆ ಶಕ್ತಿ–ಸಾಮರ್ಥ್ಯವಿದೆಯೆಂದು ತಿಳಿದು ಏನೂ ತಿಳಿಯದ ಅಸಹಾಯಕ ಪ್ರಾಣಿಗಳ ಮೇಲೆ ನಿತ್ಯ ಹಿಂಸೆ ಮಾಡುತ್ತಿರುತ್ತಾನೆ. ಉಳಿದ ಜೀವಿಗಳನ್ನು ಕೊಂದು, ತನ್ನ ಮಕ್ಕಳು ಮಾತ್ರ ಇರಬೇಕೆಂದು ಆಲೋಚಿಸುವವ ಕಟುಕನೇ ಹೊರತು ಮನುಷ್ಯನಲ್ಲ. ಮನುಷ್ಯನಾಗಬೇಕಾದರೆ ಅವನು ತನ್ನ ಜೀವನದಲ್ಲಿ ಜೀವನ ಮೌಲ್ಯ ಗಳನ್ನಳವಡಿಸಿಕೊಳ್ಳಬೇಕಾಗುತ್ತದೆ. ಅಹಿಂಸೆಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ವಚನಕಾರರು ತಿಳಿಸಿದ್ದಾರೆ.

ಅಹಿಂಸೆ ಒಂದು ಜೀವನ ಮೌಲ್ಯವಾಗಿರುವಂತೆ ಮನುಷ್ಯನ ಬದುಕಿನಲ್ಲಿ ಸಹನೆ–ತಾಳ್ಮೆಗಳು ಕೂಡ ಮಹತ್ವದ ಜೀವನ ಮೌಲ್ಯಗಳಾಗಿವೆ. ‘‘ತಾಳಿದವನು ಬಾಳಿಯಾನು’’ ಎಂಬ ಗಾದೆ ಮಾತು ಕೂಡ ಇದನ್ನೇ ಹೇಳುತ್ತದೆ. ಶಾಂತಿ–ಸಹನೆ ಇರದಿದ್ದರೆ ಮನುಷ್ಯನ ಬದುಕು ನರಕವಾಗುತ್ತದೆ. ಆದುದರಿಂದ ಬದುಕಿನಲ್ಲಿ ಮನುಷ್ಯ ಸಹನಾಶೀಲನಾಗಿರಬೇಕೆಂದು ಅಕ್ಕಮಹಾದೇವಿ ತನ್ನ ವಚನವೊಂದರಲ್ಲಿ ಹೀಗೆ ಹೇಳಿದ್ದಾರೆ.

**``ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತಡೆಯಲೊಂದು ಮನೆಯ ಮಾಡಿ,**
**ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ,**
**ಶಬ್ಧಕ್ಕೆ ನಾಚಿದಡೆಂತಯ್ಯಾ?**
**ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,**

**ಲೋಕದೊಳಗೆ ಹುಟ್ಟಿದ ಬಳಿಕ**
**ಸ್ತುತಿನಿಂದೆಗಳು ಬಂದಡೆ**
**ಮನದಲ್ಲಿ ಕೋಪವ ತಾಳದೆ**
**ಸಮಾಧಾನಿಯಾಗಿರಬೇಕು.''**

**– ಅಕ್ಕಮಹಾದೇವಿ**

ಈ ವಚನದ ಪ್ರಾರಂಭದಲ್ಲಿ ಮೂರು ಪ್ರಶ್ನೆಗಳಿವೆ. ವಚನದ ಉತ್ತರಾರ್ಧದಲ್ಲಿ ಅದಕ್ಕೆ ಉತ್ತರವಿದೆ. ಬೆಟ್ಟ–ಕಾಡಿನಲ್ಲಿ ಮೃಗಗಳಿರುತ್ತವೆಂಬುದು ತಿಳಿದ ವಿಷಯವೇ ಆಗಿದೆ. ಸಮುದ್ರ ತೀರದಲ್ಲಿ ನೊರೆತೆರೆಗಳು ಬರುತ್ತವೆಂಬುದು ಗೊತ್ತಿದ್ದ ವಿಷಯವೇ ಆಗಿದೆ. ಇನ್ನು ಸಂತೆಯಲ್ಲಿ ಗದ್ದಲವಿರುತ್ತದೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇಂತಹ ಸ್ಥಳಗಳಲ್ಲಿ ಮನೆ ಮಾಡಿಕೊಂಡಿದ್ದಾಗ ಈ ತೊಂದರೆಗಳಾಗುತ್ತವೆ. ಹೀಗೆ ಗೊತ್ತಿದ್ದೂ, ಗೊತ್ತಿದ್ದೂ ಕಾಡುಬೆಟ್ಟಗಳಲ್ಲಿ, ಸಮುದ್ರದ ತಡೆಯಲ್ಲಿ, ಸಂತೆಯಲ್ಲಿ ಮನೆ ಮಾಡಿಕೊಂಡಿರುವುದು ಎಷ್ಟು ಸೂಕ್ತವೆಂಬ ಮೂರು ಪ್ರಶ್ನೆಗಳು ಇಲ್ಲಿವೆ. ಇದು ವಚನದ ಪ್ರಾರಂಭದಲ್ಲಿ ತಿಳಿಯಬಹುದಾದ ಸಾಮಾನ್ಯ ಅರ್ಥವಾಗಿದೆ. ವಚನದ ಉತ್ತರಾರ್ಧದಲ್ಲಿ ಬರುವ ''ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'' ಎಂಬ ನುಡಿ ಈ ವಚನಕ್ಕೆ ಹೊಸ ತಿರುವನ್ನು ಕೊಡುತ್ತದೆ.

ಬೆಟ್ಟದಲ್ಲಿ ಮೃಗಗಳಿರುವುದು ಸಮಾನ್ಯ, ಆದರೆ ಊರಲ್ಲಿ ಮನುಷ್ಯರೆಂಬ ಮೃಗಗಳೂ ಇದ್ದಾರೆ. ಸಂತೆಯಲ್ಲಿ ಮಾತ್ರ ಗದ್ದಲ ಮಾಡುವವರಿಲ್ಲ, ಊರೊಳಗೇ ಗದ್ದಲ ಮಾಡುವವರಿದ್ದಾರೆ, ಹಿಂಸೆ ಮಾಡುವವರಿದ್ದಾರೆ, ಕಷ್ಟಕೊಡುವವರಿದ್ದಾರೆ. ಸಮಾಜ ವ್ಯವಸ್ಥೆ ಹೀಗಿದೆ. ಹೀಗಾಗಿ ಇಲ್ಲಿ ಬದುಕಬೇಕಾದರೆ ಸಹನೆ–ತಾಳ್ಮೆ ಬೇಕು. ಮನುಷ್ಯ ಇವೆಲ್ಲವನ್ನೂ ಸಹಿಸಿಕೊಂಡು ಸಮಾಧಾನಿಯಾಗಿರಬೇಕೆಂದು ಹೇಳುವ ವಚನದ ಕೊನೆಯ ಸಾಲು ತುಂಬಾ ಮುಖ್ಯವಾದುದಾಗಿದೆ. ಹೊನ್ನು–ಹೆಣ್ಣು–ಮಣ್ಣು ಮಾಯೆಯೆಂದು ಹಿಂದಿನಿಂದಲೂ ಹೇಳುತ್ತ ಬರಲಾಗಿದೆ. ''ಹೊನ್ನು–ಹೆಣ್ಣು–ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ''ಯೆಂದು ಶರಣರು ಸ್ಪಷ್ಟಪಡಿಸಿದರು. ಹೀಗಾಗಿ ಹೆಣ್ಣು ಮಾಯೆಯಾಗದೆ ಮಾತೆಯಾದಳು, ಮಹಾಶರಣೆಯಾದಳು. ಮಾಯೆ–ಮೋಹಗಳು ಹೊರಗಿನ ವಸ್ತುಗಳಲ್ಲಿಲ್ಲ, ಅವು ತನ್ನೊಳಗಡೆಯೇ ಇವೆಯೆಂದು ಹೇಳಿದ ವಚನಕಾರರು ನಿಜ ಮೌಲ್ಯಗಳನ್ನು ಪ್ರತಿಪಾದಿಸಿದರು.

**''ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ**
**ತನ್ನ ಬಣ್ಣಿಸಬೇಡ, ಇದಿರಹಳಿಯಲು ಬೇಡ**
**ಇದೇ ಅಂತರಂಗ ಶುದ್ದಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ''**

**–ಬಸವಣ್ಣನವರು**

ಬಸವಣ್ಣನವರ ಕ್ರಾಂತಿಗೆ ಮೂಲ ಆಧಾರವಾದಂತಹ ಈ ವಚನ ಇಡೀ ವಿಶ್ವ ಸಮುದಾಯಕ್ಕೆ ನೀಡಿದಂತಹ ಒಂದು ಸಾಮಾಜಿಕ ನೀತಿ ಸಂಹಿತೆ. ಜಗತ್ತಿನ ಮನುಕುಲಕ್ಕೆ ನೀಡಿದಂತಹ ಜೀವನ ಸಂವಿಧಾನ, ಮಾನವ ಸಂವಿಧಾನ. ಒಬ್ಬ ಮನುಷ್ಯ ತನ್ನ ಮನಸ್ಸನ್ನು ತನ್ನ ದೇಹವನ್ನು (ಚಾರಿತ್ರ್ಯವನ್ನು) ಶುದ್ಧವಾಗಿ ಇಟ್ಟುಕೊಳ್ಳಲು ಯಾವುದೇ ಧ್ಯಾನ, ಜಪ, ತಪ ಮಾಡುವಂತಹ ಅಗತ್ಯವಿಲ್ಲ. ತನ್ನ ನಿತ್ಯ ಜೀವನದಲ್ಲಿ ಬಸವಣ್ಣನವರು ಈ ವಚನದಲ್ಲಿ ಹೇಳಿರುವ ಹಾಗೆ ನಡೆದುಕೊಂಡರೆ ಅದೇ ನಮ್ಮನ್ನು ಮುಕ್ತಿಯ ದಾರಿಯೆಡೆಗೆ ಕರೆದುಕೊಂಡು ಹೋಗುತ್ತದೆ. ಬಸವಣ್ಣನವರ ಈ ವಚನವು ನೈತಿಕತೆಯ ಅಧಃಪತನದ ಕಡೆಗೆ ಸಾಗುತ್ತಿರುವ ನಮ್ಮ ಇಂದಿನ ಸಮಾಜಕ್ಕೆ ಬಹಳ ಅಗತ್ಯವಾಗಿದೆ.

**ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು**
**ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯಾ!**
**ಉಂಬ ಜಂಗಮ ಬಂದರೆ ನಡೆ ಎಂಬರು**
**ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯಾ!**
**ನಮ್ಮ ಕೂಡಲಸಂಗಮದೇವನ ಶರಣರ ಕಂಡು ಉದಾಶೀನವ**
**ಮಾಡಿದಡೆ ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯಾ!**

ಒಂದು ನಿರ್ಜೀವ ವಸ್ತುವಾದ ಕಲ್ಲಿನ ಹಾವಿನ ವಿಗ್ರಹಕ್ಕೆ ಭಕ್ತಿಯಿಂದ ಹಾಲನ್ನು ಸುರಿಯುವ ಜನ, ನಿಜವಾದ ಹಾವನ್ನು ಕಂಡಾಗ ಅದು ಒಂದು ಮೂಕ ಪ್ರಾಣಿ ಎಂಬ ವಿವೇಚನೆ ಇಲ್ಲದೆ ಅದನ್ನು ಸಾಯಿಸಲು ಪ್ರಯತ್ನಿಸುತ್ತಾರೆ. ಅದೇ ರೀತಿ ಉಣ್ಣುವ ಜಂಗಮ ಹಸಿದು ಬಂದಾಗ ಒಂಚೂರು ಕರುಣೆ ಇಲ್ಲದೆ ಆತನಿಗೆ ಏನನ್ನೂ ನೀಡುವುದಿಲ್ಲ. ಬದಲಾಗಿ ತಿನ್ನದ ಲಿಂಗಕ್ಕೆ ನೈವೇದ್ಯ ನೀಡುತ್ತಾರೆ. ಈ ರೀತಿ ನಿರ್ಜೀವ ವಸ್ತುಗಳಿಗೆ ಸುರಿದು ಪೋಲು ಮಾಡುವ ಬದಲು ಹಸಿದವರಿಗೆ ನೀಡಿ ಅದನ್ನು ಸದ್ವಿನಿಯೋಗ ಮಾಡಬಹುದು ಎಂದು ಬಸವಣ್ಣ ಹೇಳಿದ್ದಾರೆ.

ಹೀಗಾಗಿ ಅರಿವು, ಜ್ಞಾನವೆಂಬುದೂ ಕೂಡ ಪ್ರಮುಖ ಜೀವನ ಮೌಲ್ಯವಾಗಿದೆ. ಶರಣ ಸಿದ್ಧಾಂತದಲ್ಲಿ ಜ್ಞಾನ ಮತ್ತು ಕ್ರಿಯೆಗೆ ಮಹತ್ವದ ಸ್ಥಾನವಿದೆ. ಇವೆರಡೂ ಹಾರುವ ಹಕ್ಕಿಯ ಎರಡು ರೆಕ್ಕೆಗಳಂತೆಂದು ಶರಣರು ಹೇಳಿದ್ದಾರೆ. ಅರಿವೇ ಗುರುವೆಂಬ ಹೊಸ ಮೌಲ್ಯವೊಂದನ್ನು ವಚನಕಾರರು ಸೃಷ್ಟಿಸಿದ್ದಾರೆ.

**"ಕತ್ತಲೆಯ ಮನೆಯಲ್ಲಿ ಸಕ್ಕರೆಯ ಸವಿದವನಂತಿರಬೇಕು**
**ಬಟ್ಟಬಯಲಲ್ಲಿ ನಿಂದು ಇಷ್ಟಲಿಂಗವ ಕಂಡವನಂತಿರಬೇಕು**
**ಇದಕ್ಕೆ ಗುರುವಿನ ಹಂಗೇಕೆ, ಲಿಂಗದ ಪೂಜೆ ಏಕೆ, ಸಮಯದ ಹಂಗೇಕೆ?**
**ತನ್ನ ತಾನು ಅರಿದವಂಗೆ ಏಣಾಂಕನ ಶರಣರ ಸಂಗವೇಕೆ?"**
**– ಅಮುಗೆ ರಾಯಮ್ಮ**

ಈ ವಚನದಲ್ಲಿ ಅಮುಗೆ ರಾಯಮ್ಮ "ಅರಿವು" ಎಂಬ ಮೌಲ್ಯದ ಮಹತ್ವವನ್ನು

ಹೇಳಿದ್ದಾರೆ. ತನ್ನರಿವು ಜಾಗೃತವಾದಾಗ ಭಕ್ತ ತಾನೇ ಗುರುವಾಗುತ್ತಾನೆ. ಆಗ ಯಾರ ಹಂಗೂ ಇರುವುದಿಲ್ಲವೆಂಬುದು ಈ ವಚನದ ಸಾರವಾಗಿದೆ. ಕತ್ತಲೆಯ ಮನೆಯಲ್ಲಿ ಸಕ್ಕರೆಯ ಸವಿದವ ಆ ರುಚಿಯನ್ನು ಅನುಭವಿಸುತ್ತಾನೆ. ಹಾಗೆ ಅರಿವೆಂಬ ಸಕ್ಕರೆಯ ರುಚಿಯನ್ನು ಸವಿದರೆ ಬಟ್ಟಬಯಲಲ್ಲಿ ಇಷ್ಟಲಿಂಗವ ಕಾಣಲು ಸಾಧ್ಯವಾಗುತ್ತದೆ. ಭಕ್ತ ಬೆಳಬೆಳೆದಂತೆಲ್ಲ ಬಟ್ಟಬಯಲೇ ಗೋಲಾಕಾರವಾಗಿ ಇಷ್ಟಲಿಂಗ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಗುರು-ಲಿಂಗ-ಸಮಯದ ಹಂಗುಬೇಕಾಗಿಲ್ಲವೆಂಬುದನ್ನು ರಾಯಮ್ಮ ಇಲ್ಲಿ ಹೇಳಿದ್ದಾರೆ. ಇತರರನ್ನು ಅರಿಯಬಹುದು, ಆದರೆ ತನ್ನನ್ನು ತಾನು ಅರಿಯುವುದು ತುಂಬ ಕಷ್ಟ. ಅರಿಯುವುದು, ಅರಿತಂತೆ ಆಚರಣೆ ಮಾಡುವುದು, ನುಡಿದಂತೆ ನಡೆಯುವುದು ಇವೆಲ್ಲ ಶರಣರ ಜೀವನ ಮೌಲ್ಯಗಳಾಗಿವೆ. ಅತಿಯಾಸೆ ಮತ್ತು ಸಂಗ್ರಹಪ್ರವೃತ್ತಿ ಸಲ್ಲದೆಂದು ಆಯ್ದಕ್ಕಿ ಲಕ್ಕಮ್ಮ ತನ್ನ ಅನೇಕ ವಚನಗಳಲ್ಲಿ ಹೇಳಿದ್ದಾರೆ. ತನ್ನ ಪತಿ ಮಾರಯ್ಯನು, ಬಸವಣ್ಣನ ಅಂಗಳದಲ್ಲಿದ್ದ ಅಕ್ಕಿಯನ್ನು ಸಂಗ್ರಹಿಸಿ ಚೀಲಗಟ್ಟಲೆ ತಂದಾಗ ಆಕೆಗೆ ಕೋಪ ಬರುತ್ತದೆ. ಈಸಕ್ಕಿಯಾಸೆ ನಿಮಗೇಕೆ? ಎಂದು ಪತಿಯನ್ನು ಪ್ರಶ್ನಿಸುತ್ತಾರೆ. ''ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?" ಎಂದು ತಿಳಿಹೇಳುತ್ತಾರೆ. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡೆಂದು ಸ್ಪಷ್ಟಪಡಿಸುತ್ತಾರೆ. ತಂದ ಅಕ್ಕಿಯನ್ನು ಮರಳಿ ಸುರುವಿಬರಲು ಕಳಿಸುತ್ತಾರೆ. ಭಕ್ತರಾದವರು ಲಾಭಕ್ಕಾಗಿ ದಾಸೋಹ ಮಾಡಬಾರದೆಂದು ಹೇಳುತ್ತಾರೆ.

**``ಲಂಚವಂಚನಕ್ಕೆ ಕೈಯಾನದ ಭಾಷೆ**
**ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ**
**ನಾನು ಕೈಮುಟ್ಟಿ ಎತ್ತಿದನಾದರೆ**
**ನಿಮ್ಮಾಣೆ ನಿಮ್ಮ ಪ್ರಮಥರಾಣೆ...''**

**- ಸತ್ಯಕ್ಕ**

ತಮ್ಮ ಜೀವನಾನುಭವದಿಂದಲೇ ಈ ಶರಣರು ಜೀವನ ಮೌಲ್ಯಗಳನ್ನು ಕಟ್ಟಿಕೊಂಡಿದ್ದಾರೆ. ಲಂಚ, ವಂಚನೆ, ಪರಧನದ ಆಸೆ ಎಂದಿಗೂ ಸಲ್ಲದೆಂದು ಸತ್ಯಕ್ಕ ಇಲ್ಲಿ ಹೇಳಿದ್ದಾರೆ. ಪರದ್ರವ್ಯಕ್ಕಾಗಿ ಆಸೆಪಡುವುದು ಭಕ್ತನ ಲಕ್ಷಣವಲ್ಲವೆಂದು ತಿಳಿಸಿದ್ದಾರೆ. ಈ ವಚನ ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. ಲಂಚ, ಭ್ರಷ್ಟತೆಗಳೇ ತುಂಬಿ ತುಳುಕುತ್ತಿರುವ ಈ ಸಮಾಜ ವ್ಯವಸ್ಥೆಯಲ್ಲಿ ಸತ್ಯಕ್ಕನ ಮಾತುಗಳು ಬಹುಮುಖ್ಯವಾಗುತ್ತವೆ. ಲಂಚಕೇಳುವುದು, ವಂಚನೆ ಮಾಡುವುದು, ಪರಧನಕ್ಕಾಗಿ ಆಸೆ ಪಡುವುದು ಸಲ್ಲದೆಂದು ಶರಣರು ಸ್ಪಷ್ಟಪಡಿಸಿದ್ದಾರೆ.

ಪ್ರಾಮಾಣಿಕತೆ, ನಿಸ್ವಾರ್ಥದಂತಹ ಮೌಲ್ಯಗಳನ್ನು ಶರಣರು ತಮ್ಮ ವಚನಗಳ ಮೂಲಕ ಹೇಳಿದ್ದಾರೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕೆಲವು ಮಾತ್ರ ಇವೆ. ಆದರೆ ಸಾಮ್ರಾಜ್ಯಶಾಹಿ ಮನಸ್ಸುಗಳು ಎಲ್ಲ ರಾಷ್ಟ್ರಗಳಲ್ಲಿಯೂ ಇವೆ. ಸಾಮ್ರಾಜ್ಯಶಾಹಿ

ಧೋರಣೆಯನ್ನು, ಸಂಗ್ರಹ ಪ್ರವೃತ್ತಿಯನ್ನು, ಲಂಚವಂಚನೆಯನ್ನು 12ನೇ ಶತಮಾನದಲ್ಲಿಯೇ ವಿರೋಧಿಸಿದ ಶರಣರ ಜೀವನ ಮೌಲ್ಯಗಳು ಇಂದು ಎಲ್ಲ ರಾಷ್ಟ್ರದವರಿಗೂ ಆದರ್ಶವಾಗಿವೆ. ಈ ಎಲ್ಲ ಅಪರಾಧಗಳಿಗೆ ಚಂಚಲ ಮನಸ್ಸು, ಸ್ವಾರ್ಥ, ಅತಿಯಾಸೆ, ಕಪಟತನಗಳೇ ಕಾರಣಗಳಾಗಿವೆ. ಇಂತಹ ಕೆಟ್ಟಗುಣಗಳನ್ನು ತೊರೆದು, ಮನುಷ್ಯ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ವಚನಕಾರರು ತಿಳಿಸಿದ್ದಾರೆ.

**``ಚಂದನವ ಕಡಿದು ಕೊರೆದು ತೇದಡೆ**
**ನೊಂದೆನೆಂದು ಕಂಪ ಬಿಟ್ಟಿತ್ತೆ?**
**ತಂದು ಸುವರ್ಣವ ಕಡಿದೊರೆದಡೆ**
**ಬೆಂದು ಕಳಂಕ ಹಿಡಿಯಿತ್ತೆ?**
**ಸಂದು ಸಂದು ಕಡಿದ ಕಬ್ಬನ್ನು ತಂದು ಗಾಣದಲ್ಲಿಕ್ಕಿ ಅರೆದಡೆ**
**ಬೆಂದು ಪಾಕಗೊಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯಬಿಟ್ಟಿತ್ತೆ?"**
**– ಅಕ್ಕಮಹಾದೇವಿ**

ಅಕ್ಕಮಹಾದೇವಿ ಈ ವಚನದಲ್ಲಿ ಮಹತ್ವದ ವಿಷಯವನ್ನು ಹೇಳಿದ್ದಾರೆ. ಪ್ರಕೃತಿಯಲ್ಲಿರುವ ಅನೇಕ ವಸ್ತುಗಳು ತಮ್ಮ ಮೂಲ ಗುಣವನ್ನು, ಮೂಲಸತ್ವವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಆದರೆ ಮನುಷ್ಯನಾದವ ಏಕೆ ಹೀಗೆ ಮಾಡುತ್ತಾನೆ? ಎಂಬುದು ಅಕ್ಕನ ಪ್ರಶ್ನೆಯಾಗಿದೆ. ಜೀವವಿಲ್ಲದ ವಸ್ತುಗಳೇ ತಮ್ಮ ಮೂಲಸತ್ವವನ್ನು ಬಿಟ್ಟುಕೊಡದೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತವೆ. ಆದರೆ ಮನುಷ್ಯ ತನ್ನ ಮೂಲಗುಣವಾದ ಮನುಷ್ಯತ್ವವನ್ನು ಮರೆತು ಏಕೆ ದುಷ್ಟಗುಣಗಳಿಗೆ ಬಲಿಯಾಗುತ್ತಾನೆ? ಎಂಬುದರ ಬಗೆಗೆ ಶರಣರು ಗಂಭೀರವಾಗಿ ಚಿಂತಿಸಿದ್ದಾರೆ. ಈ ವಚನದಲ್ಲಿ ಒಂದೊಂದು ವಸ್ತುವಿನ ಗುಣಸ್ವಭಾವವನ್ನೂ, ಅದರ ಮೂಲಸತ್ವ–ಸಾಧ್ಯತೆಗಳನ್ನು ಹೇಳುತ್ತ ಹೋಗುತ್ತಾರೆ. ಚಂದನವನ್ನು ಅಂದರೆ ಗಂಧದ ಕಟ್ಟಿಗೆ ತುಂಡನ್ನು ಕಡಿದು, ಕೊರೆದು ತೇದರೂ ಅದು ಬದಲಾವಣೆಯಾಗುವುದಿಲ್ಲ.

ಸುಗಂಧವನ್ನೇ ಕೊಡುತ್ತದೆ. ಚಿನ್ನವನ್ನು ಕಡಿದು, ತಿಕ್ಕಿದರೂ ಅದು ತನ್ನ ಹೊಳಪನ್ನು ಕಳೆದುಕೊಳ್ಳುವುದಿಲ್ಲ, ತನ್ನ ಅಪ್ಪಟತನವನ್ನು ನಿರಂತರವಾಗಿ ಉಳಿಸಿಕೊಳ್ಳುತ್ತದೆ. ಅದೇ ರೀತಿ ಕಬ್ಬನ್ನು ತುಂಡರಿಸಿದರೂ, ಗಾಣದಲ್ಲಿ ಹಾಕಿ ತಿರುವಿದರೂ ಅದು ತನ್ನ ಸಿಹಿಯನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಹೀಗೆ ನಿಸರ್ಗದ ಈ ವಸ್ತುಗಳೆಲ್ಲ ತಮ್ಮ ಮೂಲಸತ್ವ–ಸಾಧ್ಯತೆಗಳನ್ನು ಬಿಡುವುದಿಲ್ಲ. ಆದರೆ ಮನುಷ್ಯ ಮಾತ್ರ ತನ್ನ ಮೂಲ ಸಾಧ್ಯತೆಯಾಗಿರುವ ಮನುಷ್ಯತ್ವವನ್ನು ಮರೆತು, ಪಶು–ಪ್ರಾಣಿಗಳಂತೆ ವರ್ತಿಸುತ್ತಾನೆ. ಇಂತವರಿಗೆ ಜೀವನ ಮೌಲ್ಯಗಳು ಅರ್ಥವಾಗುವುದಿಲ್ಲವೆಂದು ತಿಳಿಸಿದ್ದಾರೆ.

**ದಾಸೋಹ ಸಿದ್ಧಾಂತ:**

**"ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?**
**ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?**
**ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ**
**ಕೂಡಲಸಂಗಮದೇವಾ."**

ಲೋಕ ಕಲ್ಯಾಣದ ಕಾರ್ಯದಲ್ಲಿ ದಾಸೋಹ ಸಂಪೂರ್ಣವಾಗಿ ನೆಡೆಯಬೇಕೆಂಬುದು ಬಸವಣ್ಣನವರ ಸದಾಶಯ. ಹಂಚಿಕೊಂಡು ತಿನ್ನುವ ದಾಸೋಹ ಭಾವ ಪ್ರಾಣಿ ಪಕ್ಷಿಗಳಲ್ಲಿ ಇರುವುದನ್ನು ಗುರುತಿಸುತ್ತಾರೆ. ಪ್ರಾಣಿ ಪಕ್ಷಿಗಳಲ್ಲಿ ಇರುವ ಹಂಚಿಕೊಂಡು ತಿನ್ನುವ ಸಹಬಾಳ್ವೆಯ ಭಾವನೆ ಬುದ್ಧಿ ವಿವೇಚನೆ ಉಳ್ಳ ಮಾನವನಲ್ಲಿ ಇಲ್ಲವಲ್ಲ ಎಂಬ ತಮ್ಮ ವಿಷಾದವನ್ನು ಈ ವಚನದ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ ಮಹಾ ದಾಸೋಹಿ ಬಸವಣ್ಣನವರು.

ಅವರ ದೃಷ್ಟಿಯಲ್ಲಿ ದಾಸೋಹ, ಪ್ರೀತಿ, ಪರಸ್ಪರ ಗೌರವದಿಂದ ದಾಸೋಹದ ಫಲ. ಪಡೆಯುವವರ ಆತ್ಮಾಭಿಮಾನಕ್ಕೆ ಧಕ್ಕೆ ಆಗದ ಹಾಗೆ ನೀಡುವವರ ಹಾಗೂ ಪಡೆಯುವವರ ನಡುವೆ ಸಮಾನತೆಯ ಸ್ವಾಭಿಮಾನದಿಂದ ನಡೆಯಬೇಕಾದ ಒಂದು ಸಾಮಾಜಿಕ ಕರ್ತವ್ಯ. ಅವರ ದಾಸೋಹ ಸಿದ್ಧಾಂತದಲ್ಲಿ ಧಾರ್ಮಿಕ ಭಾವ ಹಾಗೂ ಆರ್ಥಿಕ ಚಿಂತನೆ ಎರಡೂ ಅಡಗಿವೆ. ತಾನು ಕಾಯಕದಿಂದ ಗಳಿಸಿದ ಧನವು ಲೋಕ ಕಲ್ಯಾಣಾರ್ಥವಾಗಿರಬೇಕೆಂದು ತಿಳಿಸಿದ್ದಾರೆ.

**"ಜನ್ಮ ಜನ್ಮಕ್ಕೆ ಹೋಗಲೀಯದೆ,**
**'ಸೋಹಂ' ಎಂದೆನಿಸದೆ**
**'ದಾಸೋಹಂ' ಎಂದೆನಿಸಯ್ಯಾ**
**ಲಿಂಗಜಂಗಮಪ್ರಸಾದದ ನಿಲವ ತೋರಿ ಬದುಕಿಸಯ್ಯಾ**
**ಕೂಡಲಸಂಗಮದೇವಾ ನಿಮ್ಮ ಧರ್ಮ"**

ಜನ್ಮ ಜನ್ಮಗಳ ಹಿಂದೆ ಹೋಗದೆ ನಾನೇ ಸರ್ವಸ್ವವೆಂದು ಅಹಮ್ಮನ್ನು ತೋರದೆ ದಾಸೋಹದಲ್ಲಿ ನಿರತನಾಗಿ ಲಿಂಗಜಂಗಮ ಪ್ರಸಾದದ ಮಹಿಮೆಯನ್ನು ತೋರಬೇಕು ಅಲ್ಲದೆ ದಾಸೋಹವೆಂದರೆ ಅದು ತ್ರಿವಿಧ ದಾಸೋಹವೆಂಬ ನಿಲುವು ಬಸವಣ್ಣನವರದು. ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗಮನೊಲಿಸಬೇಕೆಂದು ತಿಳಿಸಿದ್ದಾರೆ.

**ಕಾಯಕ ತತ್ವ:**

ಬಸವಣ್ಣನವರು ಪ್ರತಿಪಾದಿಸಿದ ಬಹು ದೊಡ್ಡ ಆರ್ಥಿಕ ಸೂತ್ರವೆಂದರೆ ಕಾಯಕತತ್ವ. ಬಸವಣ್ಣನವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಶರಣನಿಗೂ ಕಾಯಕ ಅನಿವಾರ್ಯ. ಕಾಯಕವಿಲ್ಲದೆ ಗುರು ಲಿಂಗ ಜಂಗಮರಿಗೂ ಮುಕ್ತಿಯಿಲ್ಲ ಎಂಬ

ಹಾಗೂ "ಕಾಯಕವೇ ಕೈಲಾಸ" ಎಂಬ ಸಿದ್ಧಾಂತದ ಪ್ರತಿಪಾದನೆಗೆ ಬಸವಣ್ಣನವರೇ ನಿಜವಾದ ಸ್ಫೂರ್ತಿಯಾಗಿದ್ದರು. ಕಾಯಕವು ಎಷ್ಟು ಮುಖ್ಯವೋ ಶರಣರು ಕೈಗೊಳ್ಳುವ ಕಾಯಕಕ್ಕೆ ಅವರು ಅಷ್ಟೇ ಗೌರವ ನೀಡಬೇಕು. ಕಾಯಕದಲ್ಲಿ ಮೇಲು ಕೀಳು ಎಂಬ ಭಾವ ಸಲ್ಲದು. ಶರಣರು ಮಾಡುವ ಕಾಯಕವು ಸತ್ಯ ಶುದ್ಧವಾಗಿರಬೇಕು, ಸಮಾಜಮುಖಿಯಾಗಿರಬೇಕು ಎಂಬುದು ಬಸವಣ್ಣನವರ ಅಚಲವಾದ ನಂಬಿಕೆ. ಈ ವಚನವು ಈ ಆಶಯವನ್ನು ಪ್ರತಿಪಾದಿಸುತ್ತದೆ.

**"ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲವೆ, ಸತ್ಪಾತ್ರಕ್ಕೆ ಸಲ್ಲದಯ್ಯ,**
**ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ,**
**ನಮ್ಮ ಕೂಡಲಸಂಗನ ಶರಣರಿಗಲ್ಲದ**
**ಮಾಡುವ ಅರ್ಥ ವ್ಯರ್ಥ ಕಂಡಯ್ಯ"**

ಇಲ್ಲಿ ಕೂಡಲ ಸಂಗನ ಶರಣರು ಎಂದರೆ ನಮ್ಮ ಸುತ್ತ ಇರುವ ಸಮಾಜ ಸಮಾಜದಲ್ಲಿನ ನೊಂದವರ ಬಗ್ಗೆ ಹಸಿದವರಿಗಾಗಿ ನಮ್ಮ ಕಾಯಕದ ಫಲ ದೊರಕಬೇಕು.

ಶ್ರಮಜೀವನದ ಶ್ರೇಷ್ಠತೆಯನ್ನು ಸಂಸ್ಥಾಪಿಸುವ ಸಲುವಾಗಿ, ವೃತ್ತಿ ಗೌರವವನ್ನು ಕಾಪಾಡುವ ಸಲುವಾಗಿ, ಸಮಾಜದ ಐಕ್ಯವನ್ನು ಸುಭದ್ರಗೊಳಿಸುವ ಸಲುವಾಗಿ, ಸಂಪತ್ತನ್ನು ವೃದ್ಧಿಗೊಳಿಸಲು ಸಂಪನ್ಮೂಲಗಳ ಸಮರ್ಥ ಬಳಕೆಗಾಗಿ ಕಾಯಕ ಸಿದ್ಧಾಂತಕ್ಕೆ ಒತ್ತುಕೊಟ್ಟರುಕಾಯಕ ತತ್ವವನ್ನು ವ್ಯಾಖ್ಯಾನಿಸಿದ ಈ ಕೆಳಗಿನ ವಚನದಲ್ಲಿ ಮಾರಯ್ಯನ ವಿಚಾರಶ್ರೇಣಿಯನ್ನು ಅರ್ಥಗರ್ಭಿತವಾಗಿ ನಿರೂಪಿಸಲಾಗಿದೆ.

**"ಕಾಯಕದಲ್ಲಿ ನಿರತನಾದಡೆ**
**ಗುರುದರ್ಶನವಾದಡೂ ಮರೆಯಬೇಕು**
**ಲಿಂಗಪೂಜೆಯಾದಡೂ ಮರೆಯಬೇಕು**
**ಜಂಗಮ ಮುಂದೆ ನಿಂದಿದ್ದಡೂ**
**ಹಂಗ ಹರಿಯಬೇಕು ಕಾಯಕವೇ ಕೈಲಾಸವಾದ ಕಾರಣ**
**ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು."**

ಎಂದು ಆಯ್ದಕ್ಕಿ ಮಾರಯ್ಯ ಹೇಳುವಲ್ಲಿ ಕಾಯಕದ ಮಹತ್ವ ಪರಾಕಾಷ್ಠೆಯನ್ನು ತಲುಪುತ್ತದೆ. ಜಗತ್ತಿನ ಪ್ರಗತಿಪರ ರಾಷ್ಟ್ರಗಳಾದ ಜಪಾನ, ಜರ್ಮನಿ ಮೊದಲಾದ ದೇಶಗಳು ಈ ತತ್ವವನ್ನು ಎತ್ತಿಕೊಂಡು ಕೃತಿಗಿಳಿಸಿರುತ್ತವೆ. ದಾರುಣ ದುರಂತವೆಂದರೆ ಯಾವ ನೆಲದಲ್ಲಿ ಈ ಸಿದ್ಧಾಂತವು ವ್ಯಕ್ತಗೊಂಡಿದೆಯೋ ಅಲ್ಲಿಯೇ ಇಂದು ನಿರುದ್ಯೋಗದ ತಾಂಡವ ನೃತ್ಯ ನಡೆದಿದೆ. ಇದಕ್ಕಿಂತ ವಿಪರೀತ ವಿಪರ್ಯಾಸ ಇನ್ನೊಂದುಂಟೇ? ರಾಷ್ಟ್ರದ ಪ್ರಗತಿಗೆ ಸಂಪನ್ಮೂಲಗಳೇ ಕಾರಣ ಈ ಸಂಪನ್ಮೂಲಗಳು ಹೆಚ್ಚಾಗಬೇಕಾದರೆ ಪ್ರತಿಯೊಬ್ಬರು ದುಡಿಯಲೇಬೇಕು. ಈ ದುಡಿತದಿಂದ ಜಡತ್ವ ತೊಲಗಿ, ಚೈತನ್ಯ ಹೊರಹೊಮ್ಮುತ್ತದೆ. ಕಾಯಕವೇ ಪ್ರತಿಯೊಬ್ಬರ ಜೀವನದ

ಕರ್ತವ್ಯವಾಗಬೇಕು. ಈ ಕಾಯಕದಲ್ಲಿ ಮೇಲು ಕೀಳುಗಳಿರುವುದಿಲ್ಲ. ಮಾನವನಲ್ಲಿ ಸುಪ್ತವಾಗಿರುವ ವಿವಿಧ ಕ್ರಿಯಾಶಕ್ತಿಯನ್ನು ಉತ್ತಮಗೊಳಿಸಿ, ಅದರಿಂದ ತನಗೂ ಉಳಿದವರಿಗೂ ಸೊಗಸುಂಟಾಗುವಂತೆ ಮಾಡುವ ಕಲೆಯೇ ಕಾಯಕ. ಮಾನವನ ಭವಿಷ್ಯತ್ತಿಗೆ "ಜ್ಞಾನೋದಯದ ಕಣ್ಣು ಕಾಯಕದ ಕೈ" ಇದ್ದಂತೆ ವೃತ್ತಿ ಎಂಬ ಸಾಮಾನ್ಯ ಅರ್ಥ ಕಾಯಕಕ್ಕಿದ್ದರೂ ಅದನ್ನೊಂದು ಜೀವನ ಮೌಲ್ಯವನ್ನಾಗಿ ಮಾಡಿದವರು 12 ನೇ ಶತಮಾನದ ಶರಣರು. ಎಲ್ಲರೂ ದುಡಿಯಬೇಕು ಜೀವನದ ನಿರ್ವಹಣೆಗೆ ಸತ್ಯಶುದ್ಧವಾದ ಕಾಯಕವೊಂದಿರಲೇಬೇಕು. ನಡೆಸುವ ಕಾಯಕದಲಿ ಮೋಸ ವಂಚನೆಗಳಿರಕೂಡದು ಕಾಯಕ ತತ್ವದಲ್ಲಿ ಸರ್ವರೂ ಸಮಾನರು. ಯಾರ ಹಂಗೂ ಇಲ್ಲದೇ, ಯಾರೊಡನೆ ಹೋರಾಟವೂ ಇಲ್ಲದೇ ಜೀವನವನ್ನೇ ಕೈಲಾಸವನ್ನಾಗಿ ಮಾಡುವ ಕ್ರಿಯಾತ್ಮಕ ತಪಸ್ಸೇ ಕಾಯಕ.

**ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು,**
**ನಾನು ಬೆವಹಾರವ ಮಾಡುವೆನಯ್ಯಾ**
**ಲಿಂಗಾರ್ಚನೆಗೆಂದು**
**ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು**
**ನಾನಾವಾವ ಕರ್ಮಂಗಳ ಮಾಡಿದಡೆಯೂ**
**ಆ ಕರ್ಮ ಫಲಭೋಗವ ನೀಕೊಡುವೆಯೆಂಬುದ ನಾ ಬಲ್ಲೆನು**
**ನೀ ಕೊಟ್ಟ ದ್ರವ್ಯವ ನಿಗಲ್ಲದೆ ಮತ್ತೊಂದು ಕ್ರೀಯ ಮಾಡೆನು**
**ನಿಮ್ಮ ಸೊಮ್ಮಿಂಗೆ ಸಲ್ಲಿಸುವೆನು ನಿಮ್ಮಾಣೆ, ಕೂಡಲ ಸಂಗಮ ದೇವಾ.**

**–ಬಸವಣ್ಣನವರು**

ನಾನು ಒಕ್ಕಲತನ ಮಾಡುವೆ; ಅದರ ಆದಾಯ ಗುರುಪೂಜೆಗೆ ಸಲ್ಲುವುದೆಂದು, ವ್ಯಾಪಾರವನ್ನು ಮಾಡುವೆ; ಅದರ ಸಂಪಾದನೆ ಲಿಂಗಪೂಜೆಗೆ ಅನುವು ಮಾಡಿ ಕೊಡುವುದೆಂದು. ಬೇರೆಯವರ ಬಳಿ ಉದ್ಯೋಗವ ಮಾಡುವೆ, ಬರುವ ಆದಾಯವನ್ನು ಜಂಗಮ ಸೇವೆಗೆ ವಿನಿಯೋಗ ಮಾಡಬಹುದೆಂದು. ಯಾವ ಉದ್ಯೋಗ ಮಾಡಿದರೆ ಏನಂತೆ ಅದರ ಆದಾಯವನ್ನು ನಾನು ನಿಮ್ಮ ಕೆಲಸಗಳಿಗೆ ಬಳಸುವನೇ ವಿನಾ ದೈವೀ ಜೀವನಕ್ಕೆ ಹೊರತಾದ ಕೆಲಸಗಳಿಗೆ ಬಳಸುವುದಿಲ್ಲ ಹೀಗೆ ವಚನದಲ್ಲಿ ಸತ್ಯ ಶುದ್ಧ ಕಾಯಕದಿಂದ ಬಂದ ಹಣ ಪವಿತ್ರವಾದುದು ಎಂದು ಹೇಳುವುದರ ಮೂಲಕ ಕಾಯಕದ ಮಹತ್ವ ತಿಳಿಸಿದ್ದಾರೆ. ಬಸವಣ್ಣನವರು ಎಲ್ಲರಿಗೂ ಕಾಯಕತತ್ವ ನೀಡಿ, ಆರ್ಥಿಕ ಭದ್ರತೆಗೂ, ನಿರುದ್ಯೋಗಕ್ಕೂ ಅಂದೇ ಪರಿಹಾರ ಸೂಚಿಸಿದ್ದಾರೆ. ಶರಣರ ಕಾಯಕವೇ ಕೈಲಾಸ ಎಂಬ ತತ್ವದಲ್ಲಿ ದುಡಿಮೆಯೇ ಪರಿಪೂರ್ಣತೆಯ ಮಾರ್ಗವೆಂದು ತಿಳಿಸಿ ದುಡಿಮೆಯ ಗೌರವವನ್ನು ಹೆಚ್ಚಿಸಿದರು. ಕಾಯಕದ ಶ್ರಮ ಸಂಸ್ಕೃತಿಯನ್ನು ದೈವತ್ವಕ್ಕೇರಿಸಿ ಅದನ್ನೊಂದು ಜೀವನ ಮೌಲ್ಯವನ್ನಾಗಿ ಮಾಡಿದರು.

**ಸಮಾಜವಾದದ ಪ್ರತಿಪಾದನೆ:**

**"ಹೊನ್ನಿನೊಳಗೊಂದೆರೆಯ**
**ಸೀರೆಯೊಳಗೊಂದೆಳೆಯ, ಅನ್ನದೊಳದೊಂದುಗುಳ**
**ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ,**
**ನಿಮ್ಮಾಣೆ, ನಿಮ್ಮ ಪ್ರಮಥರಾಣೆ,**
**ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ**
**ಕೂಡಲಸಂಗಮದೇವ. "**

ಅಂದು ದುಡಿದದ್ದನ್ನು ಅಂದಂದಿಗೇ ಬಳಸಬೇಕು. ನಾಳೆಗೆ ಬೇಕು ಎಂದು ಚಿಂತಿಸಬಾರದು ಎನ್ನುವ ಮೂಲಕ ಅನಗತ್ಯವಾಗಿ ಭವಿಷ್ಯಕ್ಕೆ ಬೇಕೆಂದು ಆಸೆಯಿಂದ ಸಂಪತ್ತನ್ನು ಸಂಗ್ರಹಿಸಿ ಇಡುವ ಪ್ರವೃತ್ತಿಯು ಶರಣರ ದೃಷ್ಟಿಯಲ್ಲಿ ಒಂದು ಸಾಮಾಜಿಕ ದ್ರೋಹವಿದ್ದಂತೆ. ಇಂತಹ ಸಾಮಾಜಿಕ ಬದುಕಿನ ನೀತಿ ಸಂತೆಯನ್ನು ಪ್ರತಿಪಾದನೆ ಮಾಡಿದ ಶರಣರಿಗೆ ದಿನ ನಿತ್ಯದ ಕಾಯಕ ಅನಿವಾರ್ಯವಾದಂತೆ ಸಮರ್ಪಣಾ ಭಾವದಿಂದ ಸಮಾಜಕ್ಕೆ ಮಾಡುವ ದಾಸೋಹವು ಸಹಾ ಅಷ್ಟೇ ಅನಿವಾರ್ಯವಾದದ್ದು ಎಂಬುದು ಅವರ ಸಮಾಜವಾದಿ ಸಮಾಜಮುಖಿ ಚಿಂತನೆಗೆ ಹಿಡಿದ ಕನ್ನಡಿಯಂತಿದೆ. ಸಮಾಜಮುಖಿ ಚಿಂತನೆಯು ಒಂದು ಪ್ರಮುಖ ಜೀವನ ಮೌಲ್ಯವನ್ನಾಗಿ ಮಾಡಿದರು.

**ನಡೆ ನುಡಿಯ ಸಮನ್ವಯತೆ:**

**"ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.**
**ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.**
**ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.**
**ನುಡಿಯೊಳಗಾಗಿ ನಡೆಯದಿದ್ದಡೆ,**
**ಕೂಡಲಸಂಗಮದೇವನೆಂತೊಲಿವನಯ್ಯಾ?"**

ಈ ವಚನದ ಮೂಲಕ ಬಸವಣ್ಣನವರು ತಾವು ಆಡಿದ ನುಡಿ ಹೇಗಿರಬೇಕು ಎಂದು ಹೇಳುತ್ತಾ ನಡೆ ನುಡಿಯ ಸಮನ್ವಯದ ಅಗತ್ಯತೆಯನ್ನು ಸಾರಿದ್ದಾರೆ. ನಮ್ಮ ನುಡಿಯು ಸತ್ಯಶುದ್ಧವಾಗಿರಬೇಕು, ಪಾರದರ್ಶಕವಾಗಿರಬೇಕು, ಪ್ರಕಾಶಮಾನವಾಗಿರಬೇಕು. ಮನವನ್ನು ಮುಟ್ಟುವಂತಿರಬೇಕು. ಈ ಎಲ್ಲ ನುಡಿಗಳು ನಡೆಯಲ್ಲಿ ತನ್ನ ಸಾರ್ಥಕ್ಯವನ್ನು ಕಂಡುಕೊಂಡು ಆತ್ಮದೊಳಗಿನ ಲಿಂಗ ನುಡಿ ನಡೆಯ ಸಮನ್ವಯವನ್ನು ಕಂಡು ಅಹುದಹುದೆಂದು ಮೆಚ್ಚಿಕೊಳ್ಳುವಂತಿರಬೇಕು. ನುಡಿದು ಅದರಂತೆ ನಡೆಯದೆ ಇದ್ದರೆ ಶಿವನು ಒಲಿಯಲಾರ ಎಂದು ಹೇಳುತ್ತಾ ನುಡಿ ನಡೆಯ ಮಹತ್ವವನ್ನು ಸಾರಿದ್ದಾರೆ.

**"ಏನಿ ಬಂದಿರಿ, ಹದುಳಿದ್ದಿರೆ ಎಂದಡೆ**
**ನಿಮ್ಮೈಸಿರಿ ಹಾರಿ ಹೋಹುದೆ?**
**ಕುಳ್ಳಿರೆಂದಡೆ ನೆಲ ಕುಳಿಹೋಹುದೆ?**

**ಒಡನೆ ನುಡಿದಡೆ ಸಿರ, ಪಟ್ಟೆಯೊಡೆವುದೆ?**
**ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ**
**ಮೂಗ ಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ?"**

ಬಸವಣ್ಣನವರ ಈ ವಚನವು ಜನ ಸಮುದಾಯದ ಜೊತೆಗೆ ಹೇಗೆ ಸ್ಪಂದಿಸಬೇಕು ಎಂಬುದನ್ನು ತುಂಬಾ ಸುಂದರವಾಗಿ ನಿರೂಪಿಸುತ್ತದೆ. ತಮ್ಮ ಬಳಿಗೆ ಬಂದವರೆಲ್ಲರನ್ನು ಸಮಾನವಾಗಿ ಕಂಡು ಅವರಿಗೆ ಸೌಜನ್ಯವನ್ನು ತೋರಿ ಅವರನ್ನು ಪ್ರೀತಿಯಿಂದ ಗೌರವದಿಂದ ಕಾಣುವ ಹಾಗೂ ಅವರನ್ನು ಅಕ್ಕರೆಯಿಂದ ಕುಳ್ಳಿರಿಸಿ ಪ್ರೀತಿಯ ಮಾತುಗಳಿಂದ ಆದರಿಸಿದರೆ ನಮ್ಮ ಮನೆಯ ನೆಲ ಕುಸಿದು ಹೋಗುತ್ತದೆಯೇ? ನಮ್ಮ ದೇಹಕ್ಕೆ ಅದರಿಂದೇನಾದರೂ ಬಾಧಕವಾಗುತ್ತದೆಯೇ? ಅವರಿಗೆ ಕೊಡಲು ಅಥವಾ ಸಹಾಯ ಮಾಡಲು ಸಾಧ್ಯವಿಲ್ಲದಿದ್ದರೂ, ಅವರಿಗೆ ಗೌರವ, ಪ್ರೀತಿ ತೋರಿಸುವ ಗುಣ ಇಲ್ಲದಿದ್ದಲ್ಲಿ ಅಂತಹವರನ್ನು ಶಿವನು ಮೆಚ್ಚುತ್ತಾನೆಯೇ ಎಂದು ಪ್ರಶ್ನಿಸುವ ಮೂಲಕ ಬಸವಣ್ಣನವರು ಜನರ ಭಾವನೆಗಳಿಗೆ ಸ್ಪಂದಿಸುವಂತಹ ಅವರ ನೋವು, ಕಷ್ಟಗಳಿಗೆ ಸಕಾರಾತ್ಮಕವಾಗಿ ಸಂವೇದಿಸುವ ಮೂಲಕ ಅಧಿಕಾರ ನಡೆಸುವವರು ತಮ್ಮ ಬಳಿಗೆ ಬಂದ ಜನರೊಂದಿಗೆ ಹೇಗೆ ವರ್ತಿಸಬೇಕು ಎಂಬ ಬಗ್ಗೆ ತಿಳಿ ಹೇಳಿದ್ದಾರೆ. ಸಾರ್ವಜನಿಕ ಬದುಕಿನಲ್ಲಿರುವ ಎಲ್ಲರಿಗೂ ಮಾದರಿಯಾಗುವಂತಹ ಸಂದೇಶವನ್ನು ಬಸವಣ್ಣನವರು ಈ ವಚನದ ಮೂಲಕ ನೀಡುತ್ತಾರೆ.

ಮೃದುವಚನಗಳೇ ಸಕಲ ಜಪಂಗಳಯ್ಯ, ಮೃದು ವಚನಗಳೇ ಸಕಲ ತಪಂಗಳಯ್ಯಾ, ಸುವಿನಯವೇ ಸದಾಶಿವನ ಒಲುಮೆಯಯ್ಯಾ ಎಂದು ಪ್ರತಿಪಾದಿಸುತ್ತಾ ಸದುವಿನಯದ ನುಡಿಗಳೇ ಉತ್ತಮ ಜೀವನಮೌಲ್ಯವಾಗಿದೆ. ಈ ಅಮೂಲ್ಯವಾದ ಜೀವನಮೌಲ್ಯ ಶಿವನ ಒಲುಮೆಗೆ ಸಾಧನ ಎಂಬ ಮಾತಿನ ಮಹತ್ವವನ್ನು ಬಸವಣ್ಣನವರು ಸ್ವತಃ ತಮ್ಮ ಬದುಕಿನಲ್ಲಿ ಅನುಷ್ಠಾನಗೊಳಿಸಿಕೊಂಡು ಜಗತ್ತಿಗೂ ಈ ಸಂದೇಶವನ್ನು ಸಾರಿದ್ದಾರೆ.

**ಅಂತರಂಗದ ಸಂಸ್ಕಾರ:**

**"ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,**
**ಆಕಳ ಹಾಲನೆರೆದು, ಜೇನುತುಪ್ಪವಯ್ದಡೆ,**
**ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ?**
**ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,**
**ಕೂಡಲಸಂಗಮದೇವಾ."**

ಈ ವಚನದಲ್ಲಿ ಬಸವಣ್ಣನವರು ಮಹತ್ವದ ಜೀವನಮೌಲ್ಯಗಳ ಬಗೆಗೆ ಹೇಳಿದ್ದಾರೆ. ಅಂತರಂಗದ ಸಂಸ್ಕಾರವಿಲ್ಲದೆ ಬಾಹ್ಯವಾಗಿ ಮಾಡುವ ಎಲ್ಲ ಉಪಚಾರಗಳೂ ವ್ಯರ್ಥವೇ. ಕಹಿ ಎಂಬುದು ಬೇವಿನ ಅಂತರಂಗದ ಸಹಜವಾದ

ಗುಣ. ಅದಕ್ಕೆ ಹೊರಗಿನಿಂದ ಸಿಹಿ ಸ್ವಭಾವವುಳ್ಳ ಬೆಲ್ಲ, ಹಾಲು, ಜೇನುತುಪ್ಪ ಮುಂತಾದ ಪದಾರ್ಥಗಳಿಂದ ಉಪಚಾರ ಮಾಡಿದರೂ ಅದು ಎಂದೂ ಸಹಾ ತನ್ನ ಕಹಿಯ ಮೂಲ ಸ್ವಭಾವವನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ಬಹಿರಂಗ ಆಚರಣೆಗಿಂತ ಅಂತರಂಗದ ಸಂಸ್ಕಾರ ಮುಖ್ಯ ಹಾಗೂ "ಶುದ್ಧಭಕ್ತಿಯಿಲ್ಲದೆ ಮಾಡುವ ಬಾಹ್ಯಪೂಜೆ ವ್ಯರ್ಥ" ಎಂಬುದು ಶರಣರ ಚಿಂತನೆ.

**ಜ್ಞಾನದ ಮಹತ್ವ:**

**"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,**
**ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,**
**ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ,**
**ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ,**
**ಕೂಡಲ ಸಂಗನ ಶರಣರ ಅನುಭಾವದ ಬಲದಿಂದ**
**ಎನ್ನ ಭವದ ಕೇಡು ನೋಡಯ್ಯಾ."**

ಬಸವಣ್ಣನವರ ದೃಷ್ಟಿಯಲ್ಲಿ ಜ್ಞಾನದ ಬಲದಿಂದ ಅಜ್ಞಾನದ ಕೇಡು, ಜ್ಯೋತಿಯ ಬಲದಿಂದ ಕತ್ತಲಿನ ಕೇಡು. ಸತ್ಯದ ಬಲದಿಂದ ಅಸತ್ಯದ ಕೇಡು, ಪರುಷದ ಬಲದಿಂದ ಅವಲೋಹದ ಕೇಡು ಎಂದು ಹೇಳುತ್ತಾ ಕೂಡಲಸಂಗನ ಶರಣರ ಅನುಭಾವದ ಸಂಸರ್ಗದಿಂದ ಎನ್ನ ಭವದ ಕೇಡು ನೋಡಯ್ಯ ಎನ್ನುತ್ತಾರೆ. ಇದರಿಂದಾಗಿ ಆಧ್ಯಾತ್ಮಿಕ ಜ್ಞಾನ, ಸತ್ಯಸಂಧತೆ, ಅನುಭಾವಿಗಳ ಒಡನಾಟದಿಂದ ವ್ಯಕ್ತಿಯ ಬದುಕು ಸಾರ್ಥಕವಾಗುತ್ತದೆ ಎಂದು ಬಸವಣ್ಣನವರು ತಮ್ಮ ವಚನದಲ್ಲಿ ನಿರೂಪಿಸಿದ್ದಾರೆ.

**"ಅರ್ಚನೆ ಪೂಜನೆ ನೇಮವಲ್ಲ,**
**ಮಂತ್ರ ತಂತ್ರ ನೇಮವಲ್ಲ**
**ಧೂಪ ದೀಪಾರತಿ ನೇಮವಲ್ಲ**
**ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ**
**ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ"**

**– ಸತ್ಯಕ್ಕ**

ಒಂದು ಸಂದರ್ಭದಲ್ಲಿ ಅರ್ಚನೆ, ಪೂಜೆ, ಮಂತ್ರ, ತಂತ್ರ, ಧೂಪದೀಪಾರತಿ ಇವೇ ನೇಮಗಳಾಗಿದ್ದವು. ಮೌಢ್ಯತೆಯಿಂದ ವಿವಿಧ ರೀತಿಯ ವ್ರತಗಳಿದ್ದವು. ಶಿವಶರಣೆಯರು ಈ ನೇಮ–ವ್ರತಗಳಿಗೆ ಹೊಸ ವ್ಯಾಖ್ಯಾನ ಬರೆದರು. ಇದು ಬಹುಮಹತ್ವದ ಧಾರ್ಮಿಕ ಕ್ರಾಂತಿಯಾಗಿದೆ. ಸತ್ಯಕ್ಕನೆಂಬ ಕಸಗೂಡಿಸುವ ಕಾಯಕ ಮಾಡುವ ಒಬ್ಬ ಸಾಮಾನ್ಯ ಮಹಿಳೆ, ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸಿ, ಹೊಸ ಜೀವನ ಮೌಲ್ಯಗಳನ್ನು ಕಟ್ಟಿಕೊಟ್ಟಿರುವುದು ನಿಜವಾಗಿಯೂ ಮಹತ್ವದ ಸಂಗತಿಯಾಗುತ್ತದೆ. ಇಲ್ಲಿ ಪರಧನ–ಪರಸ್ತ್ರೀ–ಪರದೈವಂಗಳಿಗೆರಗದಿಪ್ಪುದೆ

ನೇಮವೆಂದು ಸತ್ಯಕ್ಕ ಹೇಳಿದ್ದಾರೆ. ಪುರೋಹಿತರು ಹೇಳುವ ನೇಮಗಳೆಲ್ಲ ನೇಮಗಳಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಧಾರ್ಮಿಕಾಚರಣೆಗಳಿಗೆ ಶರಣರು ಹೊಸ ಅರ್ಥ ನೀಡುವುದರ ಮೂಲಕ ಮೌಢ್ಯತೆಯ ವಿರುದ್ಧ ದನಿಯೆತ್ತಿದ್ದಾರೆ.

"ಮನವೆಂದಡೆ ಮರವೆಗೆ ಒಳಗು ಮಾಡಿತ್ತು ತನುವೆಂದಡೆ ತಾಮಸಕ್ಕೊಳಗು ಮಾಡಿತ್ತು ಧನವೆಂದಡೆ ಆಶೆಯೆಂಬ ಪಾಶಕ್ಕೊಳಗು ಮಾಡಿತ್ತು." – ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ

ಈ ವಚನದಲ್ಲಿ ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಮಹತ್ವದ ಮೌಲ್ಯಗಳ ಬಗೆಗೆ ಹೇಳಿದ್ದಾರೆ. ತನ್ನ ತನು–ಮನ–ಧನವೇ ತನಗೆ ಉರುಲಾದಾಗ ಮನುಷ್ಯ ಏನು ಮಾಡಬೇಕೆಂಬ ಪ್ರಮುಖ ಸಂದೇಶ ಈ ವಚನದಲ್ಲಿದೆ. ಮನುಷ್ಯನ ಮನಸ್ಸು ಮರವೆಗೊಳಗಾದಾಗ ಅನೇಕ ಅಪಾಯಗಳು ಸಂಭವಿಸುತ್ತವೆ. ತನು ತಾಮಸಕ್ಕೊಳಗಾದಾಗ ಅದು ಹಾಳಾಗಿ ಹೋಗುತ್ತದೆ. ಧನದಿಂದ ಆಶೆಯ ಪಾಶ ಬೆನ್ನುಹತ್ತುತ್ತದೆ. ಈ ಸತ್ಯವನ್ನು ಹೇಳಿದ ಲಿಂಗಮ್ಮ ಇವು ಮಾಯಾಪಾಶಗಳಾಗಿವೆಯೆಂದು ತಿಳಿಸಿ, ಇವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ವಚನದ ಉತ್ತರಾರ್ಧದಲ್ಲಿ ಹೇಳಿದ್ದಾರೆ. ಮನಪರಿವರ್ತನೆ ಬಹುಮಹತ್ವದ ಕಾರ್ಯವೆಂದು ಹೇಳಲಾಗಿದೆ. ಈ ಎಲ್ಲ ಕೆಡಕುಗಳಿಗೆ ಚಂಚಲ ಮನಸ್ಸು, ಸ್ವಾರ್ಥ ಮನಸ್ಸು, ಮರವೆಯ ಮನಸ್ಸೇ ಕಾರಣವಾಗಿದೆ. ಹೀಗಾಗಿ ಮನಸ್ಸಿನ ಮಲಿನವನ್ನು ತೊಳೆದು ಅದನ್ನು ನಿರ್ಮಲವಾಗಿಟ್ಟುಕೊಳ್ಳಬೇಕು, ಆಗ ತನು–ಗುರುವಾಗುತ್ತದೆ, ಮನ–ಘನವಾಗುತ್ತದೆ, ಧನ–ಜಂಗಮವಾಗುತ್ತದೆಂದು, ಜೀವನ ಮೌಲ್ಯವಾಗುತ್ತದೆಂದು ಈ ವಚನದಲ್ಲಿ ಹೇಳಿದ್ದಾರೆ. ಹೀಗೆ ಅನೇಕ ವಚನಕಾರರು ಜೀವನ ಮೌಲ್ಯಗಳನ್ನು ಕುರಿತು ಅನೇಕ ಹೊಸ ಸಂಗತಿಗಳನ್ನು ತಿಳಿಸಿದ್ದಾರೆ. ಈ ಕುರಿತು ಹೆಚ್ಚಿನ ಚರ್ಚೆ ನಡೆಯಬೇಕಾಗಿದೆ.

**ಉಪಸಂಹಾರ:**

ಹೀಗೆ ಮೌಢ್ಯತೆಯನ್ನು ವಿರೋಧಿಸುತ್ತಲೇ ಹೊಸ ಜೀವನ ಮೌಲ್ಯಗಳನ್ನು ಹುಟ್ಟುಹಾಕಿದ್ದಾರೆ. ಚರಿತ್ರೆ–ಪುರಾಣಗಳಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಪರಧನ ಪರಸ್ತ್ರೀಗಾಗಿಯೇ ಬಡಿದಾಡಿ ಸತ್ತಿದ್ದಾರೆ. 12ನೇ ಶತಮಾನದಲ್ಲಿಯೂ ಅದೇ ಮುಂದುವರೆದಿತ್ತು. ಪರಧನವನ್ನುಲೂಟಿ ಮಾಡುವದು, ಪರಸ್ತ್ರೀಯರನ್ನು ಅಪಹರಿಸುವುದು ಸಹಜವೆಂಬಂತೆ ನಡೆಯುತ್ತಿತ್ತು. ಶಿವಶರಣರು ಈ ಬಗೆಗೆ ಗಂಭೀರವಾಗಿ ಚಿಂತಿಸಿ ಹೊಸ ಮೌಲ್ಯಗಳನ್ನು ಜಾರಿಗೆ ತಂದರು. ಅನೇಕ ರಾಜ–ಮಹಾರಾಜರು ಪರಧನಕ್ಕಾಗಿ ಬಡಿದಾಡಿ ಸತ್ತರೆ, ರಾವಣ–ದುರ್ಯೋಧನರಂತಹ ಮಹಾನ್ ವ್ಯಕ್ತಿಗಳು ಪರಸ್ತ್ರೀಗಾಗಿ ಆಸೆಪಟ್ಟು ನಾಶವಾದರು. ಪರಧನ, ಪರಸ್ತ್ರೀಗಳ

ನಿರಾಕರಣೆ ಮಹತ್ವದ ಜೀವನ ಮೌಲ್ಯವಾಗಿದೆ. ವಚನಕಾರರು ಪರಿಣಾಮಕಾರಿಯಾಗಿ ಇಂತಹ ಮೌಲ್ಯಗಳನ್ನು ಕುರಿತು ಹೇಳಿದ್ದಾರೆ.

"ವಚನಕಾರರು ಮೌಲ್ಯಗಳಿಗಾಗಿಯೇ ಬದುಕಿದವರು, ಅವರ ಜೀವನ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಅವರು 12ನೇ ಶತಮಾನದಲ್ಲಿ ರೂಪಿಸಿದ್ದ ಜೀವನ ಮೌಲ್ಯಗಳು ಇಂದಿಗೂ ಆದರ್ಶವಾಗಿವೆ. ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ, ತ್ಯಾಗ, ಸ್ನೇಹ, ಪ್ರಾಮಾಣಿಕತೆ ಇಂತಹ ಅನೇಕ ಜೀವನ ಮೌಲ್ಯಗಳನ್ನು ವಚನಕಾರರಲ್ಲಿ ಕಾಣಬಹುದಾಗಿದೆ. “

**ಪರಾಮರ್ಶನ ಗ್ರಂಥಗಳು:**


1. ನಾರಾಯಣ ಪಿ.ವಿ., (2014), ವಚನ ಸಮಸ್ತ, ಸಪ್ನ ಬುಕ್ ಹೌಸ್, ಬೆಂಗಳೂರು.
2. ನಾಗರಾಜ್ ಕಿ.ರಂ., (2017), ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು.
3. ಮುಗಳಿ ರಂ.ಶ್ರೀ., (1953), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.
4. ಚಿದಾನಂದ ಮೂರ್ತಿ ಎಂ., (2013), ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
5. ವೀರಣ್ಣ ರಾಜೂರ, (1993), ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.